# ಪತ್ರಿಕಾ ಪ್ರಕಟಣೆ ಪೊಲೀಸ್ ಆಯುಕ್ತರು ಕಲಬುರಗಿ ನಗರರವರಿಂದ
## ದಿನಾಂಕ 04-08-2020

• • • • •

ಈ ಮೂಲಕ ಎಲ್ಲಾ ಪತ್ರಿಕಾ ಮತ್ತು ಮಾಧ್ಯಮ ಮಿತ್ರರಿಗೆ ಹಾಗೂ ಸಾರ್ವಜನಿಕರ ಗಮನಕ್ಕೆ ತರುವದೇನೆಂದರೆ ದಿನಾಂಕ 05-08-2020 ರಂದು ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಶಂಕು ಸ್ಥಾಪನೆ ಪ್ರಯುಕ್ತ ಮುಂಜಾಗ್ರತಾ ಕ್ರಮವಾಗಿ ಹಾಗೂ ಕೋವಿಡ್-19 ಹಿನ್ನೆಲೆಯಲ್ಲಿಯು ಶಾಂತಿ ಸುವ್ಯವಸ್ಥೆಗೆ ಧಕ್ಕೆ ಬರುವಂತಹ ಘಟನೆಗಳು ನಡೆಯದಿರುವಂತೆ ತಡೆಗಟ್ಟುವ ಸಲುವಾಗಿ ಕಲಬುರಗಿ ಪೊಲೀಸ್ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಅಂದರೆ ಕಲಬುರಗಿ ನಗರದಾದ್ಯಂತ ದಿನಾಂಕ 04-08-2020 ರಂದು ಮಧ್ಯಾಹ್ನ 03-00 ಗಂಟೆಯಿಂದ ದಿನಾಂಕ 06-08-2020 ರ ಬೆಳಗ್ಗೆ 06-00 ಗಂಟೆಯವರೆಗೆ ಕಲಂ 144 ಸಿ.ಆರ್.ಪಿ.ಸಿ ರಂತೆ ನಿಷೇಧಾಜ್ಞೆ, ಹಾಗೂ ಸ್ಫೋಟಕ ವಸ್ತು ಮಾರಾಟ ಹಾಗೂ ಹಾರಿಸುವುದನ್ನು ನಿಷೇಧ ಮಾಡಿ ನಿಷೇಧಾಜ್ಞೆ ಆದೇಶವನ್ನು ಜಾರಿ ಮಾಡಲಾಗಿರುತ್ತದೆ.

ಪ್ರಸ್ತುತ ನಗರದಾದ್ಯಂತ ಸಾರ್ವಜನಿಕರು ಕೋವಿಡ್-19 ನಿಯಮಾವಳಿಗಳನ್ನು ಅನುಸರಿಸದೆ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೆ ಹಾಗೂ ಮಾಸ್ಕಗಳನ್ನು ಧರಿಸದೆ ಸಾಮೂಹಿಕವಾಗಿ ಗುಂಪು ಸೇರುವುದನ್ನು ಹಾಗೂ ಸಾರ್ವಜನಿಕವಾಗಿ ಸಂಭ್ರಮ ಆಚರಣೆಗಳನ್ನು ಮತ್ತು ಸಭೆಗಳನ್ನು ಏರ್ಪಡಿಸುವುದನ್ನು, ಮೆರವಣಿಗೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಮೇಲ್ಕಂಡ ಎರಡೂ ಅಂಶಗಳನ್ನು ದೃಷ್ಠಿಯಲ್ಲಿಟ್ಟುಕೊಂಡು ನಿಷೇಧಾಜ್ಞೆಯನ್ನು ಜಾರಿ ಮಾಡಲಾಗಿರುತ್ತದೆ.

ಈ ನಿಷೇಧಾಜ್ಞೆಯ ಸಮಯದಲ್ಲಿ ಸಾರ್ವಜನಿಕರು

1. ಸಾರ್ವಜನಿಕರು ತಮ್ಮ ತಮ್ಮ ಮನೆಗಳಲ್ಲಿ ಅಥವಾ ಮಂದಿರದ ಒಳಗಡೆ ಕೋವಿಡ್-19 ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಆಚರಿಸುವ ಪೂಜೆ ಮತ್ತು ಸಂಭ್ರಮಾಚರಣೆಗಳನ್ನು ಆಚರಿಸಲು ಯಾವುದೇ ನಿರ್ಬಂಧಗಳು ಇರುವುದಿಲ್ಲ.

2. ನಗರದಾದ್ಯಂತ ನಿಷೇಧಾಜ್ಞೆ ವೇಳೆಯಲ್ಲಿ ಎಲ್ಲಾ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚುವರಿಯಾಗಿ ಪೊಲೀಸ್ ಬಂದೋಬಸ್ತ ನೇಮಿಸಲಾಗಿದೆ ಹಾಗೂ. ಹಾಗೂ ಸಿ.ಸಿ ಕ್ಯಾಮರಾ ಹಾಗೂ ಡ್ರೋಣ ಮೂಲಕ ನಿಗಾವಹಿಸಲಾಗುವುದು.

ಈ ಎಲ್ಲಾ ಮೇಲಿನ ಆದೇಶ ಮಾಡಿದ ಮಾರ್ಗ ಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರೊಂದಿಗೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಲು ಕೋರಿರುತ್ತಾರೆ.

ಕಲಬುರಗಿ ನಗರದಾದ್ಯಂತ ಯಾವುದಾದರೂ ನಿಷೇದಾಜ್ಞೆ ಆದೇಶವನ್ನು ಉಲ್ಲಂಘಿಸಿದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಿ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಟ್ಟುನಿಟ್ಟಿನ ಕಾನೂನಿರೀತ್ಯ ಕ್ರಮ ಜರುಗಿಸಲಾಗುವುದು.ಎಂದು ಈ ಮೂಲಕ ಸಾರ್ವಜನಿಕರಿಗೆ ಗಮನಕ್ಕೆ ತರಲಾಗಿದೆ.

ಪೊಲೀಸ್ ಆಯುಕ್ತರ
ಕಲಬುರಗಿ ನಗರ